ಬಿದ್ದಿದ್ದಾರೆ. ನನ್ನ ಗಂಡ ಅವ್ರಿಗೆ ಏನೆಲ್ಲ ಮಾಡಿದ. ಈಗ ನೋಡು ಪಕ್ಕದಲ್ಲಿ ಅವ್ರೇ ಇಲ್ಲ. ಯಾರಿಗಾಗಿ ಈ ಡಾಲರ್ಸ್? ನಾನೂ ಬೇಗನೆ ಸತ್ತೋದರೆ ಸಾಕು' ಎನ್ನುತ್ತ ಹಣೆ ಬಡಿದುಕೊಳ್ಳತೊಡಗಿದಳು. ಮನುಷ್ಯರ ಮೇಲೆ ದೆವ್ವ ಪ್ರೇತಾತ್ಮಗಳ ಪ್ರಭಾವ ರಾತ್ರಿ ಹನ್ನೆರಡು ಗಂಟೆ ಆದಮೇಲೆ ಪ್ರಾರಂಭ ಆಗುತ್ತಂತೆ. ಬಹುಶಃ ನನ್ನ ಪತ್ನಿ ಮೇಲೆ ಈಗ ಅದೇ ಆಗುತ್ತಿರಬೇಕು? ಈಗ ಸರಕ್ಕನೆ ವಿದ್ಯುತ್ ಬಂದು ಅಲ್ಲಿದ್ದ ಜನರಿಗೆ ಅಲ್ಲದೆ ವಸ್ತುಗಳಿಗೆಲ್ಲ ಪ್ರಾಣ ಬಂದಂತಾಯಿತು.

ದೂರದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದ ಯುವಕರಲ್ಲಿ ಒಬ್ಬ `ಈ ಮುದುಕ ಹೋಗಿಹೋಗಿ ಸಾಯಂಕಾಲ ಸತ್ತೋಗಿದ್ದಾನೆ ನೋಡು. ಆಕಡೆ ರಾತ್ರೀನೂ ಅಲ್ಲ ಈ ಕಡೆ ದಿನಾನೂ ಅಲ್ಲ. ಇಡೀ ರಾತ್ರಿ ಎಲ್ಲರೂ ಹೆಣಕ್ಕೆ ಕಾವಲು ಕಾಯಬೇಕು' ಎಂದು ನನ್ನನ್ನು ನಿಂದಿಸುತ್ತಿದ್ದ. ನಾನು ಆಗಾಗ ಕುಡಿಯಲು ಹಣ ನೀಡುತ್ತಿದ್ದ ಕೆಂಚಪ್ಪ ಒಂದು ಮೂಲೆಯಲ್ಲಿ ಮಲಗಿ ಗೊರಕೆ ಹೊಡೆಯುತ್ತಿದ್ದ. ಸತ್ತ ಹೆಣವನ್ನು ಮನೆಯಲ್ಲಿ ಇಟ್ಟುಕೊಂಡು ಊಟ ತಿನ್ನಬಾರದೆಂಬ ಪದ್ಧತಿಯಿಂದ ಬಹಳಷ್ಟು ಜನರು ತಿನ್ನದೆ ಹಾಗೆ ಇದ್ದರು. ಕೆಲವರು ಊರಿನ ಒಳಗೋಗಿ ತಿಂದು ಬರುತ್ತಿದ್ದರು. ನನಗೆ ಅಂದರೆ ಆತ್ಮೊವೊ ಪ್ರೇತಾತ್ಮವೊ ಅದಕ್ಕೆ ಊಟ ಬೇಕಾ ಎಂದು ಕೇಳುವವರೂ ಯಾರೂ ಇರಲಿಲ್ಲ. ನನ್ನ ಕಡೆಗೆ ನೋಡುವವರು ಇರಲಿಲ್ಲ. ನಾನು ಕಾಣಿಸುತ್ತಿದ್ದರೆ ತಾನೆ ಅವರು ಏನಾದರು ಮಾಡಲು ಸಾಧ್ಯ? ನಮ್ಮ ಊರಿನ ಹಳೆ ದೆವ್ವಗಳು ಆ ಕಡೆಗೆ ಈ ಕಡೆಗೆ ಹಾರಾಡುತ್ತಿರುವಂತೆ ಕಾಣಿಸುತ್ತಿದ್ದವು? ಆದರೆ ಈ ದೆವ್ವಗಳು ನನ್ನ ಹತ್ತಿರ ಬಂದು ಕುಳಿತುಕೊಂಡು ಮಾತನಾಡ ಬಾರದೆ? ಬಹುಶಃ ಜನರಿರುವುದನ್ನು ನೋಡಿ ಹಾಗೇ ಹೋಗಿರಬೇಕು? ಎಲ್ಲಿಗೆ ಹೋಗುತ್ತವೆ? ನನಗೆ ಅಡ್ಡ ಬರಲೇಬೇಕು? ನಾನೂ ಈಗ ದೆವ್ವಗಳ ಕುಲಕ್ಕೆ ಸೇರಿದವನಲ್ಲವೆ?

## 1960 ರಿಂದ 1980ರ ದಶಕಗಳ ಮಧ್ಯೆ

ನನಗೆ ಮದುವೆಯಾಗಿ ಹತ್ತು ವರ್ಷಗಳು ಮುಗಿದು ಹೋಗಿದ್ದವು. ನಾನು, ಸಾವಿತ್ರಿ ಈಗ ಮಾವನ ಮನೆಗಿಂತ ಐದಾರು ಕಿ.ಮೀ.ಗಳ ದೂರದ ವಿಜಯನಗರದಲ್ಲಿ ನಮ್ಮದೇ ಸ್ವಂತ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದೆವು. ಸೆಂಟ್ರಲ್ ಕಾಲೇಜಿನ ಕ್ಯಾಂಪಸ್ ಹೊಸದಾಗಿ ಪ್ರಾರಂಭವಾಗುವ ಜ್ಞಾನಭಾರತಿ ಕ್ಯಾಂಪಸ್‌ಗೆ ಶಿಫ್ಟ್ ಆಗುವುದರಿಂದ ನಾವು ನಮ್ಮ ಮನೆಯನ್ನು ಮಲ್ಲೇಶ್ವರಂ ಮತ್ತು ಜ್ಞಾನಭಾರತಿಯ ಮಧ್ಯದಲ್ಲಿ ಕಟ್ಟಿಕೊಂಡಿದ್ದೆವು. ನಾನು ಈಗ ಭೌತಶಾಸ್ತ್ರ ವಿಭಾಗದಲ್ಲಿ ಸೀನಿಯರ್ ಲೆಕ್ಚರರ್ ಆಗಿ ಕೆಲಸ ಮಾಡುತ್ತಿದ್ದೆ. ವಿಶೇಷವೆಂದರೆ ಸಾವಿತ್ರಿ ಮತ್ತು ರಾಮಚಂದ್ರ ಅವಳಿ ಜವಳಿ ಮಕ್ಕಳಂತೆ ನಮಗೂ ಇಬ್ಬರು ಅವಳಿ ಜವಳಿ ಮಕ್ಕಳಾಗಿದ್ದರು. ಒಂದು ಗಂಡು. ಒಂದು ಹೆಣ್ಣು. ಗಂಡು ಮಗುವಿಗೆ ಅತ್ತೆ ತೇಜಸ್ ಎಂದು ಹೆಸರಿಟ್ಟರೆ ಹೆಣ್ಣು ಮಗುವಿಗೆ ಮಾವ ದಮಯಂತಿ ಎಂದು ನಾಮಕರಣ ಮಾಡಿದ್ದರು. ತೇಜಸ್ ಹುಟ್ಟಿದ ಐದು ನಿಮಿಷಗಳ ನಂತರ ದಮಯಂತಿ ಹುಟ್ಟಿದ್ದಳು.

ಸಾವಿತ್ರಿ ಇಬ್ಬರು ಮಕ್ಕಳನ್ನು ನೋಡಿಕೊಳ್ಳುವ ಕಾರಣದಿಂದ ಯಾವ ಕೆಲಸಕ್ಕೂ ಹೋಗದೆ ಮನೆಯಲ್ಲೇ ಇದ್ದಳು. ನನ್ನ ತಾಯಿ ಆಗಾಗ ಊರಿನಿಂದ ಬಂದು ನಮ್ಮ ಜೊತೆಯಲ್ಲೇ ತಿಂಗಳುಗಟ್ಟಲೆ ಮಕ್ಕಳು ದೊಡ್ಡವರಾಗುವವರೆಗೂ ಇದ್ದು ಹೋಗುತ್ತಿದ್ದರು. ನನ್ನ ತಮ್ಮನಿಗೆ ನನ್ನ ಸೋದರತ್ತೆಯ ಮಗಳನ್ನೆ ಮದುವೆ ಮಾಡಿದ್ದರಿಂದ ನನ್ನ ತಾಯಿ ಅಲ್ಲಿ ಇಲ್ಲಿ ಎರಡೂ ಕಡೆ ಓಡಾಡಿಕೊಂಡು ಇರುತ್ತಿದ್ದಳು. ಸಾವಿತ್ರಿಯ ತಂದೆ ಸಾಕಷ್ಟು ಸಹಾಯ ಮಾಡಿದ್ದರೂ ಮನೆ ಕಟ್ಟಲು ಬ್ಯಾಂಕ್‌ನಲ್ಲಿ ಸ್ವಲ್ಪ ಸಾಲವನ್ನು ಮಾಡಿಕೊಂಡಿದ್ದೆ. ಕಾಲೇಜಿನಲ್ಲಿ ಸಿಗುತ್ತಿದ್ದ ಸಂಬಳದಲ್ಲಿ ಬದುಕು ಆರಕ್ಕೇರದೆ ಮೂರಕ್ಕೆ ಇಳಿಯದೆ ಹಾಗೇ ಸಾಗುತ್ತಿತ್ತು. ಕೆಲವು ಪಿ.ಯು.ಸಿ ವಿದ್ಯಾರ್ಥಿಗಳಿಗೆ ಮನೆಯಲ್ಲೇ ಭೌತಶಾಸ್ತ್ರ ಮತ್ತು ಗಣಿತಶಾಸ್ತ್ರ ಟ್ಯೂಶನ್ ಹೇಳಿಕೊಡುವ ಹಣವನ್ನು ಸಾವಿತ್ರಿಗೆ ಕೊಡುತ್ತಿದ್ದೆ. ಸಾವಿತ್ರಿ ಆ ಹಣವನ್ನು ಮನೆಯ ಸಣ್ಣಪುಟ್ಟ ಖರ್ಚುಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದಳು.

ಒಳ್ಳೆ ವಿಷಯವೆಂದರೆ ಬೆಂಗಳೂರಿನಲ್ಲಿ ಬಾಡಿಗೆ ಮನೆಯ ಕಾಟದಿಂದ ತಪ್ಪಿಸಿಕೊಂಡು ಸ್ವಂತ ಮನೆ ಕಟ್ಟಿಕೊಂಡಿರುವುದು. ಸಾಲದ್ದಕ್ಕೆ ಪ್ರತಿಷ್ಠೆಗಾಗಿ ಒಂದು ಮಾರುತಿ 800 ಕಾರನ್ನು ತೆಗೆದು ಕೊಂಡಿದ್ದೆ. ಇದರಲ್ಲಿ ಊರಿಗೆ ಹೋದಾಗೆಲ್ಲ ನನ್ನ ತಾಯಿ ಸ್ವಚ್ಛ ಮಾಡಿ ಕೊಡುವ ರಾಗಿ, ಅಕ್ಕಿ, ನಮ್ಮ ತೋಟದಲ್ಲಿ ಬೆಳೆದ ತರಕಾರಿ ಇನ್ನಿತರ ದವಸ ಧಾನ್ಯಗಳನ್ನು ಕಾರಿನಲ್ಲಿ ತುಂಬಿಸುತ್ತಿದ್ದರು. ಆಗಾಗ ರಜೆ ಇದ್ದಾಗಲೆಲ್ಲ ಮಕ್ಕಳ ಜೊತೆಗೆ ಊರಿಗೆ ಹೋಗಿ ಹೊಲ ಗದ್ದೆ ತೋಟದಲ್ಲೆಲ್ಲ ಓಡಾಡಿಕೊಂಡು ಬೆಂಗಳೂರಿಗೆ ಹಿಂದಿರುಗುತ್ತಿದ್ದೆವು. ಸಾವಿತ್ರಿ ಒಂದೆರಡು ದಿನ ಅಡುಗೆ ಮಾಡುವ ಕೆಲಸದಿಂದ ತಪ್ಪಿಸಿಕೊಂಡು ಸ್ವಲ್ಪ ನಿರಾಳವಾಗುತ್ತಿದ್ದಳು.

ತೇಜಸ್ ಮತ್ತು ದಮಯಂತಿ ಅತ್ತ ಸಾಧಾರಣವೂ ಅಲ್ಲದ ಇತ್ತ ಹೈಫೈ ಶೈಲಿಯೂ ಅಲ್ಲದ ಮಧ್ಯಮ ವರ್ಗದ ಶಾಲೆಯಲ್ಲಿ ಚೆನ್ನಾಗಿಯೇ ಓದುತ್ತಿದ್ದರು. ಆದರೂ ಮಕ್ಕಳಿಗೆ ಮತ್ತು ಅವರ ವಿದ್ಯಾಭ್ಯಾಸಕ್ಕೆ ಸಾಕಷ್ಟು ಹಣ ಖರ್ಚಾಗುತ್ತಿತ್ತು. ಮಕ್ಕಳು ದೊಡ್ಡವರಾಗುತ್ತಿದ್ದಂತೆ ಖರ್ಚುಗಳು ಹೆಚ್ಚುತ್ತಿದ್ದವು. ಸಾವಿತ್ರಿ ಒಳ್ಳೆ ವ್ಯಾಸಾಂಗ ಹೊಂದಿದ್ದರೂ ಮಕ್ಕಳ ವಿದ್ಯಾಭ್ಯಾಸದಿಂದ ಕೆಲಸಕ್ಕೆ ಹೋಗದೆ ಮನೆಯಲ್ಲೇ ಉಳಿದುಕೊಂಡಿದ್ದಳು. ಸಾವಿತ್ರಿ ಇದ್ದುದ್ದರಲ್ಲೇ ಸಂತೋಷವಾಗಿ ಬದುಕು ನಡೆಸುತ್ತಿದ್ದಳು. ಸಾವಿತ್ರಿ ತಾನು ಕೆಲಸಕ್ಕೆ ಹೋಗಬೇಕು, ಹಣ ಸಂಪಾದಿಸಬೇಕು, ಒಡವೆಗಳನ್ನು ಕೊಂಡುಕೊಳ್ಳಬೇಕು. ಹಣವಂತರ ಮನೆಗಳಲ್ಲಿ ಇರುವಂತೆ ದೊಡ್ಡದೊಡ್ಡ ಸಾಮಾನುಗಳು, ದುಬಾರಿ ಐಟಂಗಳು ಬೇಕೆಂದು ಯಾವಾಗಲೂ ಹಠ ಹಿಡಿದವಳಲ್ಲ. ಸಾವಿತ್ರಿಯ ಬಗ್ಗೆ ನನಗೆ ಒಮ್ಮೊಮ್ಮೆ ಆಶ್ಚರ್ಯ ಹುಟ್ಟುತ್ತದೆ. ಬೆಂಗಳೂರಿನಲ್ಲಿ ಹುಟ್ಟಿ ಬೆಳೆದ ಇವಳು ಯಾವ ಆಡಂಬರವೂ ಇಲ್ಲದೆ ಅಕ್ಕಪಕ್ಕದ ಮನೆಗಳ ಹೆಣ್ಣು ಮಕ್ಕಳಂತೆ ನೋಡಿದ್ದೆಲ್ಲ ಕೊಂಡು ಮನೆ ತುಂಬಿಸಿ ಕೊಳ್ಳಬೇಕು. ಊರುಗಳನ್ನು ಸುತ್ತಬೇಕು. ಹೀಗೆ ಯಾವ ಆಸೆಯೂ ಇಲ್ಲದೆ ನಿರಾಡಂಬರವಾಗಿ ನನ್ನ ಜೊತೆಗೆ ಬದುಕು ನಡೆಸುತ್ತಿದ್ದಳು.

ಮಕ್ಕಳು ಸಣ್ಣವರಾಗಿದ್ದಾಗಿನ ಲೋಕ ನಿಜವಾಗಿಯೂ ಎಷ್ಟು ಸಂತೋಷವಾಗಿರುತ್ತದೆ ಎನಿಸುತ್ತಿತ್ತು. ಅವರನ್ನು ಕೆಲವೊಮ್ಮೆ ನೋಡುತ್ತಿದ್ದಾಗ ಇವರು ದೊಡ್ಡವರಾಗದೆ ಹೀಗೆ ಇದ್ದುಬಿಟ್ಟರೆ ಎಷ್ಟು ಚೆನ್ನಾಗಿರುತ್ತದೆ ಎನಿಸುತ್ತಿತ್ತು. ಆದರೆ ಪ್ರಕೃತಿಯ ನಿಯಮಗಳೆ ಬೇರೆ. `ಮಕ್ಕಳು ಬೆಳೆದು ಮುಂದೆ ದೊಡ್ಡವರಾಗಿ ಏನಾಗುತ್ತಾರೊ ಯಾರಿಗೆ ಗೊತ್ತು? ಮಕ್ಕಳನ್ನು ಸಾಧ್ಯವಾದಷ್ಟು ಕಾಲ ಆಡಿಕೊಳ್ಳಲು ಬಿಟ್ಟುಬಿಡಿ. ಮುಂದೆ ಅವರ ಬದುಕು ಹೇಗಿರುತ್ತದೊ ಏನೊ ಯಾರಿಗೆ ಗೊತ್ತು?' ಎಂಬುದಾಗಿ ಯಾರೋ ಮಹಾನುಭಾವರು ಹೇಳಿದ ಮಾತುಗಳನ್ನು ಎಲ್ಲೋ ಓದಿದ್ದೆ. ಆದರೆ ನಾವು ಮನುಷ್ಯರು ನಮ್ಮ ಮಕ್ಕಳನ್ನು ಆಡಿಕೊಳ್ಳಲು ಬಿಡದೆ ಶಾಲೆಗಳಿಗೆ ತಳ್ಳಿ ಜಾತಿ, ಧರ್ಮಗಳನ್ನು ಬೋಧಿಸಿ ಏನೊ ಮಾಡಲು ಹೊರಟಿದ್ದೇವೆ. ಅತ್ತ ವೈಜ್ಞಾನಿಕವೂ ಅಲ್ಲದ ಇತ್ತ ಬದುಕು ಕಲಿಸುವ ಪಾಠಗಳೂ ಇಲ್ಲದ ಶಿಕ್ಷಣವನ್ನು ನಾವು ನಮ್ಮ ಮಕ್ಕಳಿಗೆ ನೀಡುತ್ತಿದ್ದೇವೆ.

ಮದುವೆಯಾಗಿ ಹತ್ತು ವರ್ಷಗಳಾಗಿ ಎರಡು ಮಕ್ಕಳಾಗಿರುವ ಸಾವಿತ್ರಿ ನನ್ನ ಮುಖ ನೋಡಿ 'ಯಾಕ್ರೀ ಏನಾಯಿತು?' ಎಂದಳು. ನಾನು 'ಏನೂ ಇಲ್ಲವಲ್ಲ' ಎಂದಿದ್ದಕ್ಕೆ ಸಣ್ಣದಾಗಿ ನಕ್ಕ ಸಾವಿತ್ರಿ. 'ಏನೋ ಯೋಚನೆ ಮಾಡ್ತಾ ಇದ್ದೀರಿ' ಎಂದಳು. 'ನಮ್ಮ ಮಕ್ಕಳು ದೊಡ್ಡವರಾಗಿ ಏನಾಗಬಹುದು ಅಂತ ಯೋಚನೆ ಬಂತು' ಎಂದೆ. 'ಓ ಎಂತಹ ಯೋಚನೆ ಬಂದಿದೆ ನೋಡಿ ನಿಮಗೆ? ಪ್ರೊಫೆಸರ್ ಮಕ್ಕಳು ಚೆನ್ನಾಗಿ ಓದುವುದಂತು ಗ್ಯಾರಂಟಿ' ಎನ್ನುತ್ತ ಕಣ್ಣುಗಳನ್ನು ಸಣ್ಣಗೆ ಮಾಡಿಕೊಂಡು ನನ್ನನ್ನೇ ನೋಡತೊಡಗಿದಳು. ಇಬ್ಬರು ಮಕ್ಕಳ ತಾಯಿಯಾದ ಸಾವಿತ್ರಿ ಈಗಲೂ ನೋಡಲು ಎಷ್ಟು ಸುಂದರವಾಗಿದ್ದಾಳೆ ಎನ್ನುವ ಆಲೋಚನೆಯ ಒಂದು ಎಳೆ ನನ್ನ ಮನಸ್ಸಿನಲ್ಲಿ ಸುಳಿದು ಹೋಯಿತು. ಎಷ್ಟೋ ಸಲ ಬಾಯಿಗೆ ಬಂದಿದ್ದು ನಾಲಿಗೆ ದಾಟಿ ಹೊರಕ್ಕೆ ಬರುತ್ತಿರಲಿಲ್ಲ. ಪ್ರತಿ ಹೆಣ್ಣು ತನ್ನ ಪ್ರಶಂಸೆಯನ್ನು ನಿರೀಕ್ಷೆ ಮಾಡುವುದು ಸಹಜ. ಆದರೆ ಸಾವಿತ್ರಿ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಯಾವುದನ್ನೋ ಮರೆಯಲು ಹೋಗಿ ಇನ್ಯಾವುದನ್ನೋ ಯೋಚಿಸುತ್ತಿದ್ದೇನೆ. ಮತ್ತೆ ಸಾವಿತ್ರಿ 'ನಮ್ಮ ಮಕ್ಕಳು ದೊಡ್ಡವರಾಗಿ ಒಳ್ಳೆ ಹೆಸರು ಮಾಡ್ತಾರೆ ಬಿಡ್ರಿ. ನೀವು ಈಗ್ಲೆ ಯಾಕೆ ತಲೆ ಕೆಡಿಸಿಕೊಳ್ತೀರ' ಎಂದಳು.

**(ಸಶೇಷ)**